# ರಾಜಮೌಳಿ ಮುಕ್ತ ಪ್ರಶಂಸೆ ಪೃಥ್ವಿರಾಜ್ ನಮ್ರ ಪ್ರತಿಕ್ರಿಯೆ



ಇತ್ತೀಚೆಗೆ ಪ್ರಚಾರದ ಹೊಸತಂತ್ರಗಳನ್ನು ಬಹುಭಾಷಾ ಸಿನಿಮಾ ನಿರ್ಮಾಪಕರು ತಮ್ಮದಾಗಿಸಿಕೊಳ್ಳುತ್ತಿದ್ದಾರೆ. ಈಗಾಗಲೇ ದೊಡ್ಡ ಹೆಸರು ಮಾಡಿರುವ ನಿರ್ದೇಶಕರಿಂದ ತಮ್ಮ ಸಿನಿಮಾದ ನಟ–ನಟಿಯರು, ತಂತ್ರಜ್ಞರನ್ನು ಸಂದರ್ಶನ ಮಾಡಿಸುವುದು ಅಂತಹ ಒಂದು ತಂತ್ರ. ಹೀಗೆ ನಡೆಸುವ ಸಂದರ್ಶನಗಳ ವಿಡಿಯೊ ತುಣುಕುಗಳನ್ನು ಹೆಚ್ಚು ವೀಕ್ಷಕರು ಇರುವಂತಹ ಯೂಟ್ಯೂಬ್ ಚಾನೆಲ್‌ಗಳಿಗೆ ಅಪ್‌ಲೋಡ್ ಮಾಡಿಸುವ ವ್ಯವಸ್ಥಿತ ಪ್ರಚಾರಕ್ಕೆ ಈಗ ಮನ್ನಣೆ ಇದೆ.



ತೆಲುಗಿನ ಜನಪ್ರಿಯ ನಿರ್ದೇಶಕ ಎಸ್.ಎಸ್. ರಾಜಮೌಳಿ ಅವರಿಂದ ದೊಡ್ಡ ಸಿನಿಮಾಗಳ ನಟ–ನಟರನ್ನು ಸಂದರ್ಶನ ಮಾಡಿಸುವ ಪ್ರಚಾರದ ವರಸೆಗೆ ಒಳ್ಳೆಯ ಫಲ ಸಿಕ್ಕಿರುವುದನ್ನು ಕಂಡಿದ್ದೇವೆ. 'ಸಲಾರ್' ಸಿನಿಮಾ ತೆರೆಕಂಡಾಗ, ಅದರ ನಿರ್ದೇಶಕ ಪ್ರಶಾಂತ್ ನೀಲ್, ನಟರಾದ ಪ್ರಭಾಸ್ – ಪೃಥ್ವಿರಾಜ್ ಸುಕುಮಾರನ್ ಅವರನ್ನು ರಾಜಮೌಳಿ ಮಾತನಾಡಿಸಿದ್ದರು. ಆಪ್ತವಾದ ಇಂತಹ ಮಾತುಕತೆಯಲ್ಲಿ ಚಿಣ್ಣರಿಂದ ದೊಡ್ಡವರವರೆಗೂ ಹಿಡಿದಿಡಬಲ್ಲ ಪ್ರಶ್ನೆಗಳಿದ್ದವು. 'ನೀವು ಅಷ್ಟು ಅಪರೂಪವೂ, ದೊಡ್ಡದೂ ಆದ ಶಸ್ತ್ರಾಸ್ತ್ರಗಳನ್ನು ವಿಶೇಷವಾಗಿ ಗನ್–ಪಿಸ್ತೂಲ್‌ಗಳನ್ನು ಸಿನಿಮಾಗಳಲ್ಲಿ ಹೇಗೆ ವಿನ್ಯಾಸ ಮಾಡುತ್ತೀರಿ' ಎಂಬ ಪ್ರಶ್ನೆಯನ್ನು ಪ್ರಶಾಂತ್ ನೀಲ್ ಅವರಿಗೆ ಹಾಕಿದ್ದರು.

ರಾಜಮೌಳಿ ಹೀಗೆ ಪ್ರಚಾರದ ಭಾಗವಾಗಿಯೂ ರುಜು ಹಾಕುತ್ತಿರುವ ಹೊತ್ತಿನಲ್ಲೇ ಅವರು ಮಲೆಯಾಳಂ ಸಿನಿಮಾದ ನಟರಿಗೆ ಈಗ ಸಿಗುತ್ತಿರುವ ಭರ್ಜರಿ ಅಭಿನಯಾವಕಾಶವನ್ನು ಕೊಂಡಾಡಿದ್ದರು. ಸದ್ಯಕ್ಕೆ ಭಾರತದಲ್ಲಿ ಮಲೆಯಾಳಂ ನಟ–ನಟಿಯರಿಗೆ ಸಿಗುತ್ತಿರುವಷ್ಟು ಒಳ್ಳೆಯ ಅವಕಾಶಗಳು ಬೇರೆ ಭಾಷೆಗಳಲ್ಲಿ ಸಿಗುತ್ತಿಲ್ಲ ಎಂದೇ ಹೇಳಬೇಕು. ಅದರಲ್ಲಿ ಆ ಭಾಷೆಯ ನಟ–ನಟಿಯರು ಛಾಪು ಮೂಡಿಸುತ್ತಿರುವ ಬಗೆಯೂ ಅನನ್ಯ ಎಂದು ಅವರು ಹೊಗಳಿದ್ದರು.

ಇದಕ್ಕೆ ಪ್ರತಿಕ್ರಿಯಿಸಿರುವ ಪೃಥ್ವಿರಾಜ್ ಸುಕುಮಾರನ್, 'ಅವರು ದೊಡ್ಡ ನಿರ್ದೇಶಕರು. ನಮ್ಮಂತಹ ನಟ–ನಟಿಯರನ್ನು ಹೊಗಳಿದಾಗ ಸಹಜವಾಗಿಯೇ ಖುಷಿಯಾಗುತ್ತದೆ. ಹಾಗೆ ನೋಡಿದರೆ, ಒಳ್ಳೆಯ ನಟ–ನಟರು ಅನೇಕ ಭಾಷೆಗಳಲ್ಲಿ ಇದ್ದಾರೆ. ಅವರೊಟ್ಟಿಗೆ ಕೆಲಸ ಮಾಡಿದಾಗ ನನಗೂ ಅದು ಅರಿವಿಗೆ ಬರುತ್ತದೆ. ಮಲೆಯಾಳಂನಲ್ಲಿ ಸದ್ಯಕ್ಕೆ ಒಂದಿಷ್ಟು ಒಳ್ಳೆಯ ಸಿನಿಮಾಗಳು ಸತತವಾಗಿ ಬರುತ್ತಿರುವುದರಿಂದ ಇಂತಹ ಅಭಿಪ್ರಾಯ ಮೂಡುತ್ತದಷ್ಟೆ. ಉಳಿದ ಭಾಷೆಗಳಲ್ಲೂ ಎಷ್ಟೋ ಒಳ್ಳೆಯ ನಟ–ನಟಿಯರು ಅಭಿನಯಿಸುತ್ತಿರುವುದನ್ನು ನಾನಂತೂ ಗಮನಿಸಿದ್ದೇನೆ' ಎಂದು ನಮ್ರವಾಗಿ ಹೇಳಿದ್ದಾರೆ. ■



# ಬಾಲರಾಮನ ಸನ್ನಿಧಿಗೆ ಪ್ರಿಯಾಂಕಾ ದಂಪತಿ

ಅಯೋಧ್ಯೆಯ ಬಾಲರಾಮನ ಮಂದಿರವೀಗ ಸೆಲೆಬ್ರಿಟಿಗಳ ಆಡುಂಬೊಲ. ಜನವರಿಯಲ್ಲಿ ಈ ಮಂದಿರ ಉದ್ಘಾಟನೆಗೊಂಡಾಗ ಅಮಿತಾಭ್ ಬಚ್ಚನ್, ರಜನೀಕಾಂತ್, ಕಂಗನಾ ರನೌತ್, ವಿಕ್ಕಿ ಕೌಶಲ್, ಕತ್ರಿನಾ ಕೈಫ್, ಆಲಿಯಾ ಭಟ್, ರಣಬೀರ್ ಕಪೂರ್, ಮಾಧುರಿ ದೀಕ್ಷಿತ್ ಮತ್ತಿತರರು ಅಲ್ಲಿ ಹೊಳೆದಿದ್ದರು. ಮಂದಿರದ ಆವರಣದಲ್ಲಿ ನಿಂತು ತಾರೆಗಳೆಲ್ಲ ಸೆಲ್ಫಿ ತೆಗೆದುಕೊಂಡಿದ್ದು ಕೂಡ ದೊಡ್ಡ ವಿದ್ಯಮಾನವೆಂಬಂತೆ ಕಂಡಿತ್ತು.

ಸೆಲೆಬ್ರಿಟಿಗಳ ಮಂದಿರ ಭೇಟಿ ಅಷ್ಟಕ್ಕೇ ಮುಗಿದಿಲ್ಲ. ಮೊನ್ನೆ ಮೊನ್ನೆ ನಟಿ ಪ್ರಿಯಾಂಕಾ ಚೋಪ್ರಾ ತಮ್ಮ ಪುಟ್ಟ ಮಗಳನ್ನು ಹೊತ್ತು ಇದೇ ಮಂದಿರಕ್ಕೆ ಭೇಟಿ ಕೊಟ್ಟರು. ಜೊತೆಯಲ್ಲಿ ಅವರ ಪತಿ, ಗಾಯಕ ನಿಕ್ ಜೊನಾಸ್ ಕೂಡ ಇದ್ದರು. ಮಗಳು ಮಾಲತಿ ಮೇರಿ ಮುದ್ದು ಮುದ್ದಾಗಿ ಅಮ್ಮನ ಕಂಕುಳಲ್ಲಿ ನಗುತ್ತಿತ್ತು. ಹಳದಿ ಸಲ್ವಾರ್ ಕಮೀಜ್ ಧರಿಸಿದ್ದ ಪ್ರಿಯಾಂಕಾ ಚೋಪ್ರಾ ಅವರ ಹಣೆ ಮೇಲೆ ನೋಡನೋಡುತ್ತಲೇ ದೊಡ್ಡ ಆಕಾರದ ಕುಂಕುಮ ಮೂಡಿತು. ಮೇಲೆ ಕೇಸರಿ ವಸ್ತ್ರ. ಕುರ್ತಾ ಧರಿಸಿ ಮದುವೆ ಗಂಡಿನಂತೆಯೇ ಕಾಣುತ್ತಿದ್ದ ನಿಕ್ ಜೋನಾಸ್ ಕೂಲಿಂಗ್ ಗ್ಲಾಸಿನ ಒಳಗಿನ ಕಣ್ಣುಗಳು ಅಲ್ಲಿನ ಅಭಿಮಾನಿ ಪೂಜಾರಿಗಳ ವರಸೆಯನ್ನು ಸಹಜವೇ ಎಂಬಂತೆ ನೋಡುತ್ತಿದ್ದವು. ಅವರ ಹಣೆ ಮೇಲೂ ಕುಂಕುಮ ಮೂಡಿತು. ಮೇಲೊಂದು ಕೇಸರಿ ವಸ್ತ್ರ.

ವಿಮಾನನಿಲ್ದಾಣದಿಂದ ಭಾರಿ ಭದ್ರತಾ ವ್ಯವಸ್ಥೆಯ ನಡುವೆಯೇ ಪ್ರಿಯಾಂಕಾ ಕುಟುಂಬ ದೇವರ ದರ್ಶನ ಪಡೆಯಲು ಸಾಗಿಬಂದಿದ್ದೂ ಸುದ್ದಿ. ದೇವಸ್ಥಾನದ ಪೂಜಾರಿ ದೀಪಕ್ ದಾಸ್ ತಾರಾ ಕುಟುಂಬದ ಭಕ್ತಿಯ ಕ್ಷಣಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಮಾಡಿಕೊಂಡು, ಖುಷಿಪಟ್ಟಿದ್ದಾರೆ. ■